# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 2787
**ಮಾನ್ಯ ಸದಸ್ಯರ ಹೆಸರು** : ಶ್ರೀಮತಿ. ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
**ಉತ್ತರಿಸಬೇಕಾದ ದಿನಾಂಕ** : 28-03-2022
**ಉತ್ತರಿಸುವ ಸಚಿವರು** : ಪ್ರವಾಸೋದ್ಯಮ, ಜೀವಿಶಾಸ್ತ್ರ, ಹಾಗೂ ಪರಿಸರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ನಿರ್ಮಾಣಗೊಳ್ಳುತ್ತಿರುವ "ಕೊಡವ ಹೆರಿಟೇಜ್" ಕೇಂದ್ರದ ಕಾಮಗಾರಿಯು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬಂದಿದ್ದಲ್ಲಿ, ಸದರಿ ಕಾಮಗಾರಿಯು ಅನುಮೋದನೆಗೊಂಡ ವರ್ಷ ಯಾವುದು; | ಕೊಡವ ಹೆರಿಟೇಜ್ ಸೆಂಟರ್ ಕಾಮಗಾರಿಯನ್ನು ಕೇಂದ್ರ ಸರ್ಕಾರದ ಆದೇಶ ಸಂಖ್ಯೆ: 5/ಪಿಎಸ್‌ಡಬ್ಲ್ಯೂ/13/2003, ದಿನಾಂಕ:02-06-2004ರಲ್ಲಿ **ರೂ.88.75** ಲಕ್ಷಗಳ ಅಂದಾಜು ಮೊತ್ತದಲ್ಲಿ ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ ಮೂಲಕ ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ/96/ಪ್ರವಾಯೋ/2010, ದಿನಾಂಕ:18-08-2010ರಲ್ಲಿ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು ಕೆ.ಬಾಡಗ ಗ್ರಾಮದ ಸರ್ವೆ ನಂ. 12/6 ಪಿ-1 ಇದರಲ್ಲಿನ 5.00 ಎಕರೆ ಜಮೀನಿನಲ್ಲಿ ಕೊಡವ ಹೆರಿಟೇಜ್ ಸೆಂಟರ್ ನ್ನು ನಿರ್ಮಿಸುವ ಯೋಜನೆಯನ್ನು ರೂ. 145.00 ಲಕ್ಷಗಳ ಪರಿಷ್ಕೃತ ಅಂದಾಜಿಗೆ ಹಾಗು ಸದರಿ ಯೋಜನೆಯನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿರವರ ಮೂಲಕ ಜಾರಿಗೊಳಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. |
| ಇ) | ಸದರಿ ಕಾಮಗಾರಿಗೆ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು; (ಸಂಪೂರ್ಣ ವಿವರ ನೀಡುವುದು) | • ಸದರಿ ಕಾಮಗಾರಿಗೆ ದಿನಾಂಕ:02-06-2004 ರಂದು ಮೊದಲನೆ ಕಂತಾಗಿ **ರೂ.33.54** ಲಕ್ಷಗಳನ್ನು ಜೆಎಲ್‌ಆರ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.<br>• ಸದರಿ ಕಾಮಗಾರಿಗೆ ದಿನಾಂಕ:18-09-2010ರಂದು ಎರಡನೇ ಕಂತಾಗಿ **ರೂ.20.00** ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆರವರಿಗೆ ಬಿಡುಗಡೆ ಮಾಡಲಾಗಿದೆ.<br>• ಸದರಿ ಕಾಮಗಾರಿಗೆ ದಿನಾಂಕ:07-06-2014ರಂದು ಮೂರನೇ ಕಂತಾಗಿ **ರೂ.100.00** ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆರವರಿಗೆ ಬಿಡುಗಡೆ ಮಾಡಲಾಗಿರುತ್ತದೆ.<br>• ಸದರಿ ಕಾಮಗಾರಿಗೆ ದಿನಾಂಕ: 07-02-2015ರಂದು ನಾಲ್ಕನೇ ಕಂತಾಗಿ **ರೂ.100.00** ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ರವರಿಗೆ ಬಿಡುಗಡೆ ಮಾಡಲಾಗಿರುತ್ತದೆ.<br>• ಸದರಿ ಕಾಮಗಾರಿಗೆ ದಿನಾಂಕ: 08-12-2021ರಂದು ಐದನೇ ಕಂತಾಗಿ **ರೂ.29.00** ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆರವರಿಗೆ ಬಿಡುಗಡೆ ಮಾಡಲಾಗಿರುತ್ತದೆ.<br>• ಒಟ್ಟಾರೆಯಾಗಿ, ಸದರಿ ಕಾಮಗಾರಿಗೆ ಒಟ್ಟು ರೂ. 282.54 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. |

| | | |
|---|---|---|
| ಈ) | ಪ್ರಸ್ತುತ ಕಾಮಗಾರಿಯು ಯಾವ ಹಂತದಲ್ಲಿದೆ ಹಾಗೂ ವಿಳಂಬಕ್ಕೆ ಕಾರಣಗಳೇನು; | **ಪ್ರಸ್ತುತ ಹಂತ:**<br>ಕೊಡವ ಹೆರಿಟೇಜ್ ಸೆಂಟರ್ ಕಾಮಗಾರಿಯಲ್ಲಿ 2 ಸಂಖ್ಯೆಯ ಐನ್ ಮನೆಗಳ ಮೇಲ್ಚಾವಣಿಯ ಕೆಲಸ, ಪ್ರವೇಶ ದ್ವಾರ, ಅಡುಗೆ ಕೊಠಡಿ, ಮೆಟ್ಟಿಲುಗಳು, ಆಂಪಿಕ್ ಥಿಯೇಟರ್, ಗ್ರಂಥಾಲಯ, ವಿದ್ಯುದೀಕರಣ, ಕಿಟಕಿ ಬಾಗಿಲುಗಳ ಜೋಡಣೆ ಕೆಲಸ ಪೂರ್ಣಗೊಂಡಿದೆ. ಹೊಸದಾಗಿ 25 ಕೆ.ವಿ.ಎ ಟ್ರಾನ್ಸ್ ಫಾರ್ಮ ಕೆಲಸ ಪೂರ್ಣಗೊಂಡಿದೆ.<br>**ವಿಳಂಬಕ್ಕೆ ಕಾರಣಗಳು:**<br>• ಕೊಡವ ಹೆರಿಟೇಜ್ ಸೆಂಟರ್ ಕಾಮಗಾರಿಯನ್ನು ಕೇಂದ್ರ ಸರ್ಕಾರದ ಆದೇಶ ಸಂಖ್ಯೆ:5/ಪಿಎಸ್‌ಡಬ್ಲ್ಯೂ/13/2003, ದಿನಾಂಕ:02-06-2004ರಲ್ಲಿ ರೂ.88.75 ಲಕ್ಷಗಳ ಅಂದಾಜು ಮೊತ್ತದಲ್ಲಿ ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ ಮೂಲಕ ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ.<br>ಈ ಯೋಜನೆಯ ಅನುಷ್ಠಾನ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ದಿನಾಂಕ: 25-04-2008ರಂದು ರಚಿಸಲಾಗಿದೆ.<br>ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆರವರು ಈ ಕಾಮಗಾರಿಯನ್ನು ಕೈಗೊಳ್ಳಲು ಕೆ.ಬಾಡಗ ಗ್ರಾಮದ ಸರ್ವೆ ನಂ.12/6ಪಿ1ರಲ್ಲಿ 5 ಎಕರೆ ಜಮೀನನ್ನು ಕೊಡವ ಹೆರಿಟೇಜ್ ಸೆಂಟರ್ ನಿರ್ಮಿಸಲು ಕಾಯ್ದಿರಿಸಿ, ದಿನಾಂಕ:11-06-2009ರಂದು ಆದೇಶ ಹೊರಡಿಸಿರುತ್ತಾರೆ. ಜಿಲ್ಲಾಧಿಕಾರಿಗಳ ಸಮಿತಿಯು ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆ, ಮಡಿಕೇರಿರವರ ಮೂಲಕ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ಕೋರಿದ್ದು, ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ/96/ಪ್ರವಾಯೋ/2010, ದಿನಾಂಕ:18-08-2010ರಲ್ಲಿ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು ಕೆ.ಬಾಡಗ ಗ್ರಾಮದ ಸರ್ವೆ ನಂ. 12/6 ಪಿ-1 ಇದರಲ್ಲಿನ 5.00 ಎಕರೆ ಜಮೀನಿನಲ್ಲಿ ಕೊಡವ ಹೆರಿಟೇಜ್ ಸೆಂಟರ್‌ನ್ನು ನಿರ್ಮಿಸುವ ಯೋಜನೆಯನ್ನು ರೂ. 145.00 ಲಕ್ಷಗಳ ಪರಿಷ್ಕೃತ ಅಂದಾಜಿಗೆ ಹಾಗು ಸದರಿ ಯೋಜನೆಯನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿರವರ ಮೂಲಕ ಜಾರಿಗೊಳಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.<br>• ಸದರಿ ಕಾಮಗಾರಿಯು ಗುಡ್ಡಪ್ರದೇಶದಲ್ಲಿ ನಿರ್ಮಾಣ ಕಾಮಗಾರಿಯಾಗಿದ್ದು, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಿದ ಸಂದರ್ಭದಲ್ಲಿ ಅನುಮೋದಿತ ಅಂದಾಜಿನಲ್ಲಿ ಲ್ಯಾಟರೈಟ್ ತಡೆಗೋಡೆಗಳಿಗೆ ಅನುವು ಮಾಡಿದ್ದು, ಇಳಿಜಾರು ಪ್ರದೇಶದಲ್ಲಿ ಲ್ಯಾಟರೈಟ್ ಗೋಡೆಗಳನ್ನು ನಿರ್ಮಿಸಿದ್ದಲ್ಲಿ, ಗೋಡೆಗಳು ಜರುಗುವ ಸಾಧ್ಯತೆ ಇರುವುದರಿಂದ ಮುಖ್ಯ ಇಂಜಿನಿಯರ್ (ಸಂಪರ್ಕ ಮತ್ತು ಕಟ್ಟಡಗಳು)ರವರು ವಿನ್ಯಾಸವನ್ನು ಬದಲಾಯಿಸಿ ಲ್ಯಾಟರೇಟ್ ತಡೆಗೋಡೆಗಳ ಬದಲಾಗಿ ಸರಳು ಸಹಿತ (ಆರ್.ಸಿ.ಸಿ) ತಡೆಗೋಡೆಗಳನ್ನು ನಿರ್ಮಿಸಲು ಸೂಚಿಸಿದ್ದರಿಂದ ಸರ್ಕಾರದ ಆದೇಶ ಸಂಖ್ಯೆ: ಪ್ರಇ/95/ಪ್ರವಾಯೋ/2013, ದಿನಾಂಕ:21-03-2014ರಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತವನ್ನು ರೂ.145.00 ಲಕ್ಷಗಳ ಬದಲಾಗಿ ರೂ.268.04 ಲಕ್ಷಗಳಲ್ಲಿ ಕೈಗೊಳ್ಳಲು ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br>• ಸದರಿ ಕಾಮಗಾರಿಯನ್ನು ಕೈಗೊಳ್ಳಲು ಗುತ್ತಿಗೆದಾರರಾದ ಶ್ರೀ ಹೇಮಾಶಂಕರ್ ರವರಿಗೆ ಕಾರ್ಯಾದೇಶ ನೀಡಿ ವಹಿಸಲಾಗಿರುತ್ತದೆ. |

..3..

| | | |
|---|---|---|
| | | • ಕಾಮಗಾರಿಯು ಪರಿಷ್ಕೃತ ಅಂದಾಜು ಪಟ್ಟಿಯ ಅನುಸಾರ ಕೆಲಸವನ್ನು ಮಂದಗತಿಯಲ್ಲಿ ನಿರ್ವಹಿಸುತ್ತಿದ್ದುದರಿಂದ ಗುತ್ತಿಗೆದಾರರಿಗೆ ಹಲವಾರು ನೋಟಿಸ್ ನೀಡಿದರೂ, ಕಾಮಗಾರಿ ಪೂರ್ಣಗೊಳಿಸಲು ಆಸಕ್ತಿ ವಹಿಸದೆ ಕಾಮಗಾರಿಯನ್ನು ಅರ್ಧಕ್ಕೆ ಸ್ಥಗಿತಗೊಳಿಸಿದ ಕಾರಣ, ಸದರಿ ಗುತ್ತಿಗೆದಾರರ ಕರಾರನ್ನು ದಿನಾಂಕ:27-11-2018ರಂದು ಅನುಷ್ಠಾನ ಸಂಸ್ಥೆಯಾದ ಲೋಕೋಪಯೋಗಿ ಇಲಾಖೆರವರು ಗುತ್ತಿಗೆದಾರರನ್ನು ರದ್ದುಗೊಳಿಸಿರುತ್ತಾರೆ. ಈ ಸಂಬಂಧ ಗುತ್ತಿಗೆದಾರರು ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ.<br>• ಸದರಿ ಕಾಮಗಾರಿಗೆ ಅನುಮೋದನೆಯಾಗಿರುವ ರೂ.268.04 ಲಕ್ಷಗಳ ಅಂದಾಜು ಮೊತ್ತದನ್ವಯ ಮೂಲಗುತ್ತಿಗೆದಾರರಿಗೆ ರೂ.170.00 ಲಕ್ಷಗಳು ಪಾವತಿಯಾಗಿದ್ದು, ಸದರಿ ಉಳಿಕೆ ಕಾಮಗಾರಿಯನ್ನು ನಿರ್ವಹಿಸಲು ಶ್ರೀ ಕಿಶೋರ್ ಬಾಬುರವರು ನಮೂದಿಸಿರುವ ಟೆಂಡರ್ ಮೊತ್ತಕ್ಕೆ ಗುತ್ತಿಗೆ ವಹಿಸಿದಲ್ಲಿ ರೂ.62,41,110/-ಗಳು ಹೆಚ್ಚುವರಿಯಾಗುತ್ತಿದ್ದು, ಈ ಮೊತ್ತವನ್ನು ಮೂಲ ಗುತ್ತಿಗೆದಾರರ ಹೊಣೆ ಮತ್ತು ಜವಾಬ್ದಾರಿ ಮೇಲೆ ವಸೂಲಾತಿ ಮಾಡಬೇಕಾಗಿರುತ್ತದೆ. ಪ್ರಸ್ತುತ ಕಾಮಗಾರಿಯನ್ನು ಪೂರ್ಣಗೊಳಿಸಲು ಈಗಾಗಲೇ ಅನುಮೋದನೆಯಾಗಿರುವ ಪರಿಷ್ಕೃತ ಅಂದಾಜು ಮೊತ್ತ ರೂ.2,68,04,000/-ಗಳನ್ನು ಹೊರತುಪಡಿಸಿ ರೂ.62,41,110/-ಗಳ ಹೆಚ್ಚುವರಿ ಅನುದಾನದ ಅವಶ್ಯಕತೆಯಿರುತ್ತದೆ ಎಂದು **ರೂ.3,30,45,110/-ಗಳಿಗೆ** ಪರಿಷ್ಕೃತ ಅಂದಾಜು ಪಟ್ಟಿ ಸಲ್ಲಿಸಿ, ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರುರವರು ಕೋರಿರುತ್ತಾರೆ.<br>• ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/84/ಟಿಡಿಪಿ/2020, ದಿನಾಂಕ: 27-05-2020ರಲ್ಲಿ ಸದರಿ ಕಾಮಗಾರಿಗೆ ರೂ.268.04 ಲಕ್ಷಗಳಿಗೆ ಅನುಮೋದನೆ ನೀಡಿರುವುದನ್ನು ಮಾರ್ಪಡಿಸಿ, ಸದರಿ ಕಾಮಗಾರಿಯನ್ನು ಪರಿಷ್ಕೃತ ಅಂದಾಜು ಮೊತ್ತ ರೂ.3,30,45,110/-ಗಳಲ್ಲಿ ಕೈಗೊಳ್ಳಲು ಸಲ್ಲಿಸಿರುವ ಪರಿಷ್ಕೃತ ಅಂದಾಜು ಪಟ್ಟಿಗೆ ಅನುಮೋದನೆ ನೀಡಲಾಗಿರುತ್ತದೆ.<br>• 2020-21ರಲ್ಲಿ ಕೋವಿಡ್-19 ಲಾಕ್‌ಡೌನ್ ಹಾಗೂ ಮಳೆಗಾಲವಿದ್ದ ಕಾರಣ ಕಾಮಗಾರಿ ವಿಳಂಬವಾಗಿದ್ದು, ಪ್ರಸ್ತುತ ಭೌತಿಕ ಕಾಮಗಾರಿ ಕಾಮಗಾರಿ ಪೂರ್ಣಗೊಂಡಿರುತ್ತದೆ. ಅನುಷ್ಠಾನ ಸಂಸ್ಥೆಯಿಂದ ಕಾಮಗಾರಿ ಪೂರ್ಣಗೊಂಡ ಪ್ರಮಾಣಪತ್ರ ನಿರೀಕ್ಷಿಸಲಾಗುತ್ತಿದೆ. |
| ಉ). | ಸದರಿ ಕಾಮಗಾರಿಗೆ ಬಿಡುಗಡೆಯಾಗಬೇಕಾದ ಇನ್ನೂ ಎಷ್ಟು ಅನುದಾನ ಇದುವರೆಗೆ ಬಿಡುಗಡೆಯಾಗದೇ ಬಾಕಿ ಉಳಿದಿದೆ; ಇದಕ್ಕೆ ಕಾರಣಗಳೇನು? | ಸದರಿ ಕಾಮಗಾರಿಗೆ ರೂ.47,91,110/-ಗಳ ಬಾಕಿ ಅನುದಾನ ಬಿಡುಗಡೆ ಮಾಡಬೇಕಾಗಿದೆ. ಸದರಿ ಕಾಮಗಾರಿಗೆ ಐದನೇ ಕಂತಾಗಿ ಬಿಡುಗಡೆ ಮಾಡಿರುವ ರೂ.29.00 ಲಕ್ಷಗಳಿಗೆ ಹಣಬಳಕೆ ಪ್ರಮಾಣ ಪತ್ರ, ಛಾಯಾಚಿತ್ರ, 3ನೇ ವ್ಯಕ್ತಿ/ ಸಂಸ್ಥೆಯಿಂದ ಗುಣಪರಿಶೀಲನಾ ವರದಿ, ಶಾಸನಬದ್ಧ ಕಟಾವಣೆಗಳ ವಿವರ ಹಾಗೂ ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಿದ ನಂತರ, ಬಾಕಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು. |

**ಸಂಖ್ಯೆ: TOR 176 TDV 2022**

(ಆನಂದ್ ಸಿಂಗ್)
ಪ್ರವಾಸೋದ್ಯಮ, ಜೀವಿಶಾಸ್ತ್ರ
ಹಾಗೂ ಪರಿಸರ ಸಚಿವರು